14. ಮತ್ತೆ ಯಾವ ಸಂಗತಿ ಬೇಕಾಗಿದ್ದರೂ ಸೂಪರ್‌ಟೆಂಡೆಂಟರ ಆಫಿಸಿನಲ್ಲಿ ವಿಚಾರಿಸಿ ತಿಳಿದುಕೊಳ್ಳಬಹುದು.

15. ಈ ಕಂಟ್ರಾಕ್ಟುಗಳು ಮೈಸೂರ ಜೈಲ್ ಇನ್ಸ್‌ಪೆಕ್ಟರ್ ಜನರಲ್‌ರವರ ಪುಂಜೂರಾತಿಗೆ ಒಳಪಟ್ಟು ಇರುವವು.

16. ಕಂಟ್ರಾಕ್ಟುದಾರರು ಇಜಾರೆಯನ್ನು ತೆಗೆದುಕೊಂಡ ತರುವಾಯ ತಮ್ಮ ಕರಾರಿನಂತೆ ನಡೆಯಲು ಇಷ್ಟ ಪಡದಿದ್ದರೆ, ಒಂದು ತಿಂಗಳಿಗೆ ಮುಂಚಿತವಾಗಿಯೇ ನೋಟಿಸ್ ಕೊಡಬೇಕು, ಮತ್ತು ಅವರ ಸೆಕ್ಯೂರಿಟಿ ಹಣವನ್ನು ಸರಕಾರಕ್ಕೆ ಬಿಟ್ಟುಬಿಡಬೇಕು.

17. ಇಜಾರೆದಾರರು ತಪ್ಪಿ ಹೋಗುವುದರಿಂದ ಸರ್ಕಾರಕ್ಕೆ ಆಗುವ ನಷ್ಟವನ್ನೂ ಅಥವಾ ಕಂಟ್ರಾಕ್ಟಿನಲ್ಲಿ ನಮೂದಾಗುವ ಪದಾರ್ಥಗಳನ್ನೂ ಸರ್ಕಾರದವರು ಕಂಟ್ರಾಕ್ಟು ದರಕ್ಕಿಂತಲೂ ಹೆಚ್ಚುದರದ ಮೇರೆ ಬಜಾರದಲ್ಲಿ ಕೊಂಡುಕೊಂಡರೆ ಆ ನಷ್ಟವನ್ನೂ ಇಜಾರೆದಾರರು ಸರ್ಕಾರಕ್ಕೆ ಭರ್ತೀಮಾಡಿ ಕೊಡಬೇಕು. ವಿಚಾರ—ಮೇಲೆ ನಮೂದಾದ ಕಂಟ್ರಾಕ್ಟುಗಳ ವಿಷಯದಲ್ಲಿ ಯಾವ ವಿಧವಾದ ರಿಸಾಯಿತಿಯೂ ದೊರೆಯಲಾರದು.

ಡಿ. ಎ. ಜೋಕ್ಸ್,
ಬೆಂಗಳೂರ ಸೆಂಟ್ರಲ್ ಜೈಲ್ ಸೂಪರ್‌ಟೆಂಡೆಂಟ್.

ಕೋಲಾರ ಡಿಸ್ಟ್ರಿಕ್ಟ್.

ತಾರೀಖು 13ನೇ ಏಪ್ರೆಲ್ 1896.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ,—

I. ಕೋಲಾರ ಡಿಸ್ಟ್ರಿಕ್ಟು ಚಿಕ್ಕಬಳ್ಳಾಪುರ ಸಬ್ ಡಿವಿಜನಿಗೆ ಕೇರಿದ ಗೋರೀಬಿದನೂರು ತಾಲ್ಲೂಕಿನಲ್ಲಿ ಅಫಿಫಿಯಲ್ ಸಾಲ್ ಅಂದರೆ 1896ನೇ ಇಸವಿ ಜುಲೈ ಲಾಗಾಯತು 1897ನೇ ಇಸವಿ ಜೂನ್ ಆಖೈರವರಿಗೆ ಕುರಂಗದ ಕಲ್ಲುಗಳನ್ನು ಜಮಾಯಿಸಿಕೊಳ್ಳತಕ್ಕ ಹಕ್ಕುದಾರಿಯನ್ನು ಸದರಿ ತಾಲ್ಲೂಕು ಕಚೇರಿಯಲ್ಲಿ 1896ನೇ ಇಸವಿ ಮೇ ಮಾಹೆ 28ನೇ ತಾರೀಖಿನಲ್ಲಿ ಬಹಿರಂಗವಾಗಿ ಹರಾಜು ಮಾಡಲ್ಪಡುವದು.

II. ಸದರಿ ಹರಾಜು ಸದರಿ ತಾರೀಖು ಬಿವಿ 11 ಘಂಟೆಗೆ ಅಮಲ್‌ದಾರ್ ಯಾ ಶಿರಸ್ತೇದಾರ್‌ರಿಂದಲಾಗಲಿ ಹರಾಜು ಪ್ರಾರಂಭ ಮಾಡಲ್ಪಡುವದು.

III. ಸದರಿ ಹರಾಜು ಚಿಕ್ಕಬಳ್ಳಾಪುರ ಸಬ್ ಡಿವಿಜ್ ಆಫಿಸರವರ ಮಂಜೂರಾತಿಗೆ ವಳಪಟ್ಟದ್ದಾಗಿರುತ್ತೆ.

IV. ಹರಾಜಿನಲ್ಲಿ ಸವಾಲ್ ಮಾಡತಕ್ಕಂಥಾವರು ತಮ್ಮ ಸ್ವಂತಕ್ಕೋಸ್ಕರ ಸವಾಲ್ ಮಾಡುತ್ತಾರೆಯೇ ಅಥವಾ ಮತ್ತೊಬ್ಬರಿಗೋಸ್ಕರ ಸವಾಲ್ ಮಾಡುತ್ತಾರೆಯೇ ನಮೂದಿಸಬೇಕು ಮತ್ತೊಬ್ಬರಿಗೋಸ್ಕರವಾದರೆ ಅಂಥಾವರ ಬರಹಮೂಲಕವಾದ ಅಧಿಕಾರ ಪತ್ರಿಕೆಯನ್ನು ಅಂದರೆ ಅವರ ದಸ್ಕತ್ತು ಇರತಕ್ಕ ಕಾಗದವನ್ನು ಹಾಜರ್‌ಮಾಡಬೇಕು ಇಲ್ಲವಾದರೆ ಅಂಥಾವರ ಸವಾಲನ್ನು ಅಂಗೀಕರಿಸುವದಿಲ್ಲ.

ಕ್ರಯದಾರನು ಹರಾಜು ಕಾಲದಲ್ಲಿ ಕ್ರಯದ ಮೊಬಲಗು ಪೈಕಿ ಕೇಕಡಾ 25 ರೂಪಾಯಿನಂತೆ ಆಗುವ ಮೊಬಲಗು ಡಿಪಾಜಿಟ್ ಇಡಬೇಕು ಹರಾಜು ಮಂಜೂರ್‌ಮಾಡಲ್ಪಟ್ಟ ಸಂಗತಿ ಕ್ರಯದಾರನಿಗೆ ತಿಳಿಸಲ್ಪಟ್ಟ ತಾರೀಖು ಲಾಗಾಯತು 7 ದಿವಸದಲ್ಲಿ ಕ್ರಯದ ಮೊಬಲಗ್ ಮೇಲೆ ರೂಪಾಯಿ 1ಕ್ಕೆ 1 ಆಣೆ ಮೇರಿಗೆ ಆಗುವ ಲೋಕಲ್‌ನಸ್ ದೇಖೀಲ್ ಬಾಕಿ ಮೊಬಲಗನ್ನು ಪಾವತಿ ಮಾಡಬೇಕು ಹಾಗೆ ಡಿಪಾಜಿಟ್ ಮೊಬಲಗೇ ಆಗಲಿ ಪೂರಾ ಮೊಬಲಗೇ ಆಗಲಿ ಕೊಡದೆ ತಪ್ಪಿದರೆ ಡಿಪಾಜಿಟ್ ಮೊಬಲಗು ಕೊಟ್ಟು ಬಾಕಿ ಮೊಬಲಗು ಕೊಡದೆ ತಪ್ಪಿದರೆ ಡಿಪಾಜಿಟ್ ಮೊಬಲಗು ದಂಡವಾಗಿ ಸರಕಾರಕ್ಕೆ ಸೇರಿಸಿಕೊಂಡು ಹರಾಜು ಹಕ್ಕುದಾರಿಯನ್ನು ಅವ್ವಟ್ ಕ್ರಯದಾರನ ಖರ್ಚಿಗೂ ಮತ್ತು ಲುಕ್ಸಾನಿಗೂ ವಳಪಡಿಸಿ ಪುನಹ ಹರಾಜು ಮಾಡಲ್ಪಡುವದು.

ಇಜಾರೆದಾರನು ಹಿಡುವಳಿ ಜಮೀನಿನಲ್ಲಿರತಕ್ಕ ಕಲ್ಲುಗಳನ್ನು ಅವನ ಅನುಮತಿ ವಿನಾಯಿ ತೆಗದುಕೊಳ್ಳಕೂಡದು ಈ ಜಮೀನಿನ ಹಿಡುವಳಿದಾರನಾದರೂ ಸ್ವಂತ ಉಪಯೋಗಕ್ಕೋಸ್ಕರವಾಗಿ ಜಮಾಯಿಸತಕ್ಕದ್ದಲ್ಲ ಆದರೆ ಜಮಾಯಿಸತಕ್ಕ ಕಲ್ಲುಗಳನ್ನ ಇಜಾರೇದಾರನಿಗೆ ಕೊಡಬೇಕೇ ಹೊರ್ತು ಮತ್ತೊಬ್ಬರಿಗೆ ಕೊಡತಕ್ಕದ್ದಲ್ಲ.

ಇಜಾರೆದಾರನು ಹುಲ್ಲುಬನ್ನಿ ಇಜಾರೆದಾರನ ಜರೂರ್ ಹಕ್ಕಿನಲ್ಲಿ ಪ್ರವೇಶಿಸಕೂಡದು ಇಜಾರೆದಾರನಿಗೆ ಇಜಾರೆ ಮಾಡಿಕೊಂಡು ಇರುವ ಪ್ರದೇಶದಲ್ಲಿ ಇರತಕ್ಕ ಕಲ್ಲುಗಳನ್ನ ಜಮಾಯಿಸಿಕೊಳ್ಳತಕ್ಕ ಹಕ್ಕು ಮಾತ್ರ ಇರತಕ್ಕದ್ದಾಗಿರುತ್ತೆ ಪರಂತು ಬಂಜರು ಜಮೀನುಗಳನ್ನ ಸಾಗುವಳಿ ಬಗ್ಯೆ ಕೊಡುವದಕ್ಕೋಸ್ಕರ ಬರುವ ದರಖಾಸ್ತುಗಳಿಗೆ ಇಜಾರೆದಾರನ ಅಭ್ಯಂತರವೇನೂ ಇಲ್ಲ.

ಇಜಾರೆದಾರನು ಕಲ್ಲುಗಳಿಗೋಸ್ಕರ ಜಮೀನುಗಳನ್ನ ಅಗಿಯಕೂಡದು ಬಂದು ವ್ಯಾಳ ಆಗದಲ್ಲಿ ಸಾಗುವಳಿ ಲಾಯಖಾಗುವಂತೆ ಗುಣಿಗಳನ್ನ ಮುಚ್ಚಿಸಬೇಕು ಇಜಾರೆದಾರನು ಯಾವ ಪ್ರದೇಶದಲ್ಲಿ ಜಮಾಯಿಸುತ್ತಾನೆಯೋ ಗ್ರಾಮ ಕಲ್ಲಿನ ಪೊತ್ತ ಯಾವ ಸ್ಥಳಕ್ಕೆ ರವಾನೆ ಮಾಡುತ್ತಾನೋ ಈ ವಗೈರೆ ತಪ್ಪಿಲ್ ಕಂಡು ಅಮಲ್‌ದಾರ್‌ರಿಂದ ಮಾಫಿ ಲೈಸೆನ್ಸು ಪಡದು ರವಾನಿಸಬೇಕು ಲೈಸೆನ್ಸು ಇಲ್ಲದೆ ರವಾನಿಸಕೂಡದು ಈ ಮೇರಿಗೆ ತಿಳಿಯಪಡಿಸಿ ಇಧೆ.

ಬಿ. ಜಿ. ಕೃಷ್ಣಯ್ಯಂಗಾರ್,
ಆ|| ಡೆಪ್ಯೂಟಿ ಕಮ್ಮಿಷನರ್.

ಮೈಸೂರ ಡಿಸ್ಟ್ರಿಕ್ಟ್.

ಪ್ರಕಟನೆ.

ತಾರೀಖು 6ನೇ ಮೇ 1896.

ಮೈಸೂರು ಡಿಸ್ಟ್ರಿಕ್ಟಿನಲ್ಲಿ ಇದರಡಿಯಲ್ಲಿ ಕಂಡ ಹೋಬಳಿಗಳಲ್ಲಿ ಸಂದಲ್ ಮರಗಳನ್ನು ಬೇರು ಸಮೇತವಾಗಿ ಕೀಳಿಸಿ ವೊಟ್ಟಿಕೆತ್ತನೆ ಮಾಡಿ ಆಯಾ ಹೋಬಳಿಗಳಿಗೆ ಬಾಜೂದಲ್ಲಿ ತೋರಿಸಿರುವ ಕೋಠಿಗಳಿಗೆ 1896ನೇ ಇಸವಿ ಅಕ್ಟೋಬರ್ ಆಖೈರ್ ವಳ